206412 ರೈತರು 22176 ಟನ್ ರಸಗೊಬ್ಬರಗಳನ್ನು ಮತ್ತು ಕರ್ನಾಟಕ ರಸಗೊಬ್ಬರ ರಿಯಾಯಿತಿ ಬೆಲೆ ಯೋಜನೆಯಲ್ಲಿ 1,55,066 ಟನ್ ರಸಗೊಬ್ಬರಗಳನ್ನು ವಿತರಿಸಲಾಗಿದೆ.

ವಿಷಯ : – ರಸಗೊಬ್ಬರದ ಸಹಾಯಧನದ ಅಸಮರ್ಪಕ ವಿತರಣೆ ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 125(638)

ಶ್ರೀ ಪಿ.ಜಿ.ಆರ್ ಸಿಂಧ್ಯ (ಕನಕಪುರ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?.

ಅ) ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ ರೈತರಿಗೆ ಗೊಬ್ಬರದ ಮೇಲೆ ಕೊಟ್ಟಿರುವ ಸಹಾಯಧನ ಎಷ್ಟು?(ಸಬ್ಸಿಡಿ ರೂಪದಲ್ಲಿ)

ಆ)ಇದರಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ಹಣವೆಷ್ಟು?

ಇ) ಈ ಹಣದ ವಿತರಣೆಯು ಸರಿಯಾಗಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ ರಸಗೊಬ್ಬರಗಳ ಸಹಾಯಧನದ ಎರಡು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ದಿನಾಂಕ 1-4-93ರಿಂದ ಅನುಷ್ಠಾನಗೊಳಿಸಿರುವ ಸಣ್ಣ ಮತ್ತು ಅತಿಸಣ್ಣ ರೈತರ ವಿಶೇಷ ನೆರವು ಯೋಜನೆಗೆ 27.90 ಕೋಟಿ ರೂಪಾಯಿಗಳನ್ನು ಮತ್ತು ದಿನಾಂಕ 1-7-93ರಿಂದ ಅನುಷ್ಠಾನಗೊಳಿಸಿರುವ ಕರ್ನಾಟಕ ರಸಗೊಬ್ಬರ ಬೆಲೆ ರಿಯಾಯಿತಿ ಯೋಜನೆಗೆ 41.723 ಕೋಟಿ ರೂಪಾಯಿಗಳ ಸಹಾಯಧನವನ್ನು ನೀಡಲಾಗಿದೆ.

ಈ ಎರಡೂ ಯೋಜನೆಗಳಿಗೆ ಪೂರ್ಣ ಸಹಾಯ ಧನವನ್ನು ಕೇಂದ್ರ ಸರ್ಕಾರವು ಭರಿಸಲಿದ್ದು ಈವರೆಗೆ ಸಣ್ಣ ಮತ್ತು ಅತಿಸಣ್ಣ ರೈತರ ವಿಶೇಷ ನೆರವು ಯೋಜನೆಗೆ 21.229 ಕೋಟಿ ರೂಪಾಯಿಗಳು ಮತ್ತು ಕರ್ನಾಟಕ ರಸಗೊಬ್ಬರ ರಿಯಾಯಿತಿ ಬೆಲೆ ಯೋಜನೆಯಡಿ 10.43 ಕೋಟಿ ರೂ.ಗಳ ನೆರವು ಕೇಂದ್ರ ಸರ್ಕಾರದಿಂದ ಬಂದಿರುತ್ತದೆ.

ಇಲ್ಲ

ಉದ್ಭವಿಸುವುದಿಲ್ಲ.

ವಿಷಯ : – ರಸಗೊಬ್ಬರಗಳಿಗೆ ಸಹಾಯಧನ ನೀಡುವ ಬಗ್ಗೆ .

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 137 (595)

ಶ್ರೀ ಜಿ. ರಾಜುಗೌಡ (ಹನೂರು)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ರಿಯಾಯಿತಿ ದರದಲ್ಲಿ ರಸಗೊಬ್ಬರಗಳನ್ನು ರೈತರಿಗೆ ಒದಗಿಸುವ ಸಲುವಾಗಿ ಕೇಂದ್ರ ಸರ್ಕಾರದವರು ಈ ವರ್ಷ ನಮ್ಮ ರಾಜ್ಯಕ್ಕೆ ನೀಡಿರುವ ಸಹಾಯ ಧನವೆಷ್ಟು?

ಆ) ಮುಕ್ತ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು ರೈತರಿಗೆ ಏಕರೂಪದ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಲು ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆಯೇ?

ಇ) ಕಳೆದ ವರ್ಷ ಒಂದು ಟನ್ ಡೈಅಮೋನಿಯಂ ಫಾಸ್ಫೇಟ್ ರಸಗೊಬ್ಬರದ ನಿಯಂತ್ರಿತ ಬೆಲೆ ಎಷ್ಟು ಇತ್ತು?

ಶ್ರೀ ಎನ್.ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

1993-94ನೇ ಸಾಲಿನ ಮುಂಗಾರು ಹಂಗಾಮಿಗೆ ಕೇಂದ್ರ ಸರ್ಕಾರವು ರಿಯಾಯಿತಿ ದರದಲ್ಲಿ ರೈತರಿಗೆ ರಸಗೊಬ್ಬರಗಳನ್ನು ಒದಗಿಸಲು 1.723 ಕೋಟಿ ರೂಪಾಯಿಗಳ ಸಹಾಯ ಧನವನ್ನು ನಿಗದಿ ಪಡಿಸಲಾಗಿದ್ದು, ಇದರಲ್ಲಿ 10.43 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇದಲ್ಲದೆ 1992-93ನೇ ಸಾಲಿನಲ್ಲಿ ಯೋಜಿಸಿದ್ದು 1-4-1993ರಿಂದ ಅನುಷ್ಠಾನಗೊಳಿಸುತ್ತಿರುವ ಸಣ್ಣ ಮತ್ತು ಅತಿಸಣ್ಣ ರೈತರ ವಿಶೇಷ ನೆರವು ಯೋಜನೆಯಲ್ಲಿ ರಸಗೊಬ್ಬರಗಳ ಸಹಾಯಧನಕ್ಕಾಗಿ ನಿಗದಿಪಡಿಸಿರುವ 27.90 ಕೋಟಿ ರೂಪಾಯಿಗಳಲ್ಲಿ 21.229 ಕೋಟಿ ರೂಪಾಯಿಗಳನ್ನು ನೀಡಿದೆ.

ಬೆಲೆ ನಿಯಂತ್ರಣದಲ್ಲಿರುವ ನೇರ ಸಾರಜನಕ ಗೊಬ್ಬರಗಳು ಮಾತ್ರ ರೈತರಿಗೆ ಏಕರೂಪ ಬೆಲೆಯಲ್ಲಿ ದೊರೆಯುತ್ತಿವೆ.

ಹಿಂದಿನ ವರ್ಷ ಡೈಅಮೋನಿಯಂ ಫಾಸ್ಫೆಟ್ ರಸಗೊಬ್ಬರವನ್ನು ನಿಯಂತ್ರಣ ಬೆಲೆ ಪ್ರತಿ ಟನ್‌ಗೆ

4680 ರೂಪಾಯಿಗಳಿತ್ತು(ತೆರಿಗೆ ರಹಿತ)

ಶ್ರೀ ಡಿ.ಬಿ.ಚಂದ್ರೇಗೌಡ : – ಮಾನ್ಯ ಅಧ್ಯಕ್ಷರೇ, ಮೊನ್ನೆ ಇಂಥದೇ ಒಂದು ಪ್ರಶ್ನೆ ಬಂದಿತ್ತು, 209ನೇ ಪ್ರಶ್ನೆ ಎಂದು ಕಾಣುತ್ತದೆ. ನಾನು ಇಲ್ಲಿ ಕೇಳಿರತಕ್ಕಂಥದ್ದು ಬರೆ ಅಂಕಿಸಂಖ್ಯೆಗಳನ್ನಲ್ಲ.1992-93ನೇ ಸಾಲಿಗೆ ಕೇಂದ್ರ ಸರ್ಕಾರದಿಂದ 27 ಕೋಟಿ ರೂಪಾಯಿ ಅನುದಾನ ಬಿಡುಗಡೆಯಾಯಿತು. ಈ ಹಣ ಉಪಯೋಗವಾಗಿಲ್ಲ; ಅದರ ಉಪಯುಕ್ತತೆ ರೈತರಿಗೆ ಸಿಗಲಿಲ್ಲವೆಂದು ಕಳೆದ ಅಧಿವೇಶನದಲ್ಲೂ ಕೂಡ ನಾನು ಪುನಃ ಪ್ರಸ್ತಾಪ ಮಾಡಿದ್ದೇನೆ. ಈಗ 41ಕೋಟಿ ರೂಪಾಯಿನ ಅನುದಾನ; ಅದಕ್ಕಾಗಿ ತಾವು ಪೂರಕ ಅಂದಾಜನ್ನು ಕೂಡ ಕೇಳಿದ್ದೀರಿ. ರಾಸಾಯನಿಕ ಗೊಬ್ಬರ ಸಬ್ಸಿಡಿ ಯೋಜನೆಯ ಖಾರೀಫ್ 93 ಇದನ್ನು ಅನುಷ್ಠಾನಕ್ಕೆ ತರಲು ಕೇಂದ್ರ ಸರ್ಕಾರವು 4,172ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಿದೆ. ಈ ಯೋಜನೆಯಲ್ಲಿ 1-7-93ರಿಂದ ರಾಸಾಯನಿಕ ಗೊಬ್ಬರದ ಬೆಲೆಯಲ್ಲಿ ರಿಯಾಯಿತಿಯನ್ನು ಕೊಡಲಾಗಿದೆ. 1-4-93ಕ್ಕೆ ಇದು ಜಾರಿಗೆ ಬರಬೇಕಾಗಿತ್ತು. ನೀವು 1-7-93ರಿಂದ ಇದು ಜಾರಿಗೆ ಬರುತ್ತದೆಂದು ಹೇಳಿದ್ದೀರಿ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ರಸಗೊಬ್ಬರಕ್ಕೆ ಬಿಡುಗಡೆ ಮಾಡಿರತಕ್ಕಂಥ ಅನುದಾನ ಮತ್ತು ಕರ್ನಾಟಕದ ರಸಗೊಬ್ಬರದ ರಿಯಾಯಿತಿ ಯೋಜನೆಯಲ್ಲಿ 41 ಕೋಟಿ ರೂಪಾಯಿ ಹೀಗೆ ಅನುದಾನ ಬರುತ್ತದೆಂದು ಹೇಳಿದ್ದೀರಿ. ಇಲ್ಲಿ ಎಲ್ಲವನ್ನೂ ಕೇಂದ್ರ ಸರ್ಕಾರವೇ ಭರಿಸುತ್ತದೆಂದು ಹೇಳಿದ್ದೀರಿ. ಇದರಲ್ಲಿ ಯಾವುದು ಸರಿ? ಒಟ್ಟು ಇದುವರೆಗೆ 1-4-93ರಿಂದ ಎಷ್ಟು ಜನ ರೈತರು ಇದರ ಲಾಭವನ್ನು ಪಡೆದಿದ್ದಾರೆ? ಎಷ್ಟು ಸಬ್ಸಿಡಿಯ ಹಣ ಉಪಯೋಗವಾಗಿದೆ? ನೀವು ಕಳೆದಸಾರಿ ಕೊಟ್ಟಿರತಕ್ಕಂಥ ಫಿಗರ್ಸ್ ಬೇರೆ ಇವೆ. ಕೇವಲ 2 ಕೋಟಿ ಮಾತ್ರ ಆಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಬಿಡುಗಡೆ ಮಾಡಿದ್ದೇ 21ಕೋಟಿ ಎಂದು ಹೇಳಿದ್ದೀರಿ. ಯೂಟಿಲೈಸೇಷನ್ ಎಷ್ಟು? ಇವತ್ತು ರಸಗೊಬ್ಬರದ ಅವೈಲಬಿಲಿಟಿ ಇಲ್ಲ. ನಿನ್ನೆ ಮಾರುಕಟ್ಟೆಯಲ್ಲಿ ಸಿ.ಐ.ಎಸ್.ಬೆಲೆ 97 ರೂಪಾಯಿ ಆದರೆ ಸಬ್‌ಸಿಡೈಸ್ಡ್ 200 ರೂಪಾಯಿಗಳಿಗೆ ಮಾರಾಟವಾಗಿದೆ, ನಾನೇ ತರಿಸಿದ್ದೇನೆ, ಬೇರೆಯವರಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದಕ್ಕೆ ಅವರು ಬಿಲ್ಲನ್ನು ಕೊಡುವುದಿಲ್ಲ. ತಮಿಳುನಾಡಿನಿಂದ ಈ ಗೊಬ್ಬರ ಬರುತ್ತದೆ. ಆ ಗೊಬ್ಬರ ಬೇಕೆಂದರೆ ಇಷ್ಟು ಬೆಲೆಯನ್ನು ಕೊಟ್ಟು ತೆಗೆದುಕೊಳ್ಳಬೇಕು. 103 ರೂಪಾಯಿ

ಹೆಚ್ಚು ಬೆಲೆ ಒಂದು ಮೂಟೆಗೆ ಕೊಟ್ಟು ತೆಗೆದುಕೊಂಡಿದ್ದೇವೆ. ಸಲ್‌ಫೇಟ್ ಆಫ್ ಪೊಟ್ಯಾಷ್ 500 ರೂಪಾಯಿಗೆ ಮಾರಾಟವಾಗುತ್ತಿದೆ. ನಾನು ನಿನ್ನೆ 10 ಸಾವಿರ ರೂಪಾಯಿಗೆ ಒಂದು ಟನ್‌ನಂತೆ ಬೆಲೆ ಕೊಟ್ಟು ತೆಗೆದುಕೊಂಡಿದ್ದೇನೆ. ಈ ರಾಜ್ಯದ ಜನತೆಗೆ ನಿನ್ನೆ ಮೊನ್ನೆಗೆ ನಮ್ಮ ನಿರೀಕ್ಷೆಗೆ ಮೀರಿ ಎಲ್ಲಾ ಕಡೆಗೂ ಮಳೆಯಾಗಿದೆ. ನಿಮ್ಮಲ್ಲೀಗ ಇರುವುದು ಎಷ್ಟು? ಇದುವರೆಗೆ ಉಪಯೋಗಿಸಿರತಕ್ಕಂಥ ಗೊಬ್ಬರ, ಮತ್ತು ಅದಕ್ಕೆ ಕೊಟ್ಟಿರತಕ್ಕಂಥ ಸಬ್‌ಸಿಡಿ ಹಣ ಎಷ್ಟು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಹುಚ್ಚಮಾಸ್ತಿಗೌಡ :- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮೊಟ್ಟಮೊದಲು 27.30ಕೋಟಿ ರೂಪಾಯಿಗಳು ಬಿಡುಗಡೆ ಮಾಡಿರುವುದರಲ್ಲಿ ಒಟ್ಟು 21ಕೋಟಿ ಚಿಲ್ಲರೆ ಬಿಡುಗಡೆಯಾಗಿತ್ತು. ಈಗಾಗಲೇ ಸುಮಾರು 40 ಕೋಟಿ ರೂ.ಗಳು ಬಿಡುಗಡೆಯಾಗಿ, ಅಷ್ಟೂ ಖರ್ಚಾಗಿದೆ. ಇದರಲ್ಲಿ 22,176 ಟನ್ ಗೊಬ್ಬರ ಈಗ ಹಂಚಲಾಗಿದೆ. ಇದರಲ್ಲಿ ಅಷ್ಟು ಹಂಚಿಕೆಯಾಗಿರುವುದರ ಜೊತೆಗೆ ಕೇವಲ ಬಹಳ ಕಡಿಮೆ ಗೊಬ್ಬರ ಮಾತ್ರ ಉಳಿದಿದೆ, ಇದರ ಜೊತೆಗೆ ಈ ವರ್ಷದ ಆಖೈರ್‌ವರೆಗೆ ಕೇಂದ್ರ ಸರ್ಕಾರ ಸಣ್ಣ ಅತಿ ಸಣ್ಣ ರೈತರಿಗೆ ಕೊಡಬೇಕಾದಂಥ ಗೊಬ್ಬರದ ಸಹಾಯವನ್ನು ನಾವು ಪೂರ ಕೊಡುತ್ತೇವೆಂದು ಹೇಳಿದ್ದು, ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ. ಅದರಂತೆ ನಾವು ಬಿಡುಗಡೆ ಮಾಡುತ್ತಿದ್ದೇವೆ. ಈಗ ಇರುವಂತೆ ಯಾವ ತೊಂದರೆಯೂ ಕೂಡ ಆಗಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಇದು ಬಹಳ ಕಷ್ಟ. ನಾವು ಒಟ್ಟು ಎಷ್ಟು ಹಣ ಖರ್ಚಾಗಿದೆ, ಈ ರಾಜ್ಯ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ ಎಂಬುದನ್ನು ಕೇಳಿದ್ದೇವೆ ಈವತ್ತು ಇವರು ಬಿಡುಗಡೆ ಮಾಡಿರುವ ಪಟ್ಟಿ ಹಾಗೂ ಕಂದಾಯ ಮಂತ್ರಿಗಳ ಲಿಸ್ಟ್ ಇದೆ; ಕಂದಾಯ ಮಾಫಿ ಮಾಡಿದ್ದೇವೆಂದು ಹೇಳುತ್ತಾರೆ. ಹಣ ಬಿಡುಗಡೆಯಾಗಿದೆ ಅಂದಮೇಲೆ ಖಜಾನೆಯಲ್ಲಿ ಹಣ ಇರಬೇಕಲ್ಲಾ ಸರ್ಕಾರದಿಂದ ಯಾವಾಗ ಬಿಡುಗಡೆ ಆರ್ಡರ್ ಬರುತ್ತದೆ. ಅದು ಜಾರಿಯಾಗುತ್ತಿಲ್ಲ. ರೈತರಿಗೆ ಸಬ್ಸಿಡಿ ಹಣ ಎಷ್ಟು ಖರ್ಚಾಗಿದೆ ಎಂದು ಕೇಳಿದೆ; ಅದರ ವಿವರ ಕೊಟ್ಟಿಲ್ಲ. ಎಷ್ಟು ಹಣ ಯುಟಿಲೈಸ್ ಆಗಿದೆ ಎಂಬುದನ್ನು ಹೇಳಬೇಕು. ಗೊಬ್ಬರದ ಅವೈಲಬಿಲಿಟಿ ಎಷ್ಟು ಎಂದು ಕೇಳಿದೆ ಅದನ್ನು ಕೊಡಲಿಲ್ಲ; 1-4-93ರಿಂದ ಜಾರಿಗೆ ಬರಬೇಕಾದುದನ್ನು 1-7-93ರಿಂದ ಜಾರಿಗೆ ಕೊಟ್ಟಿದ್ದೀರಿ. ಈ ಮಧ್ಯೆ ಸಹಕಾರಿ ಸಂಸ್ಥೆಗಳಲ್ಲಿ ಮಾರಾಟ ಮಾಡತಕ್ಕ ವ್ಯವಸ್ಥೆ ಇದೆ. ಈ ಸಹಕಾರಿ ಸಂಸ್ಥೆಗಳು 1-4-93ಕ್ಕೆ ಮುಂಚೆ ಗೊಬ್ಬರವನ್ನು ಕೊಂಡಿದ್ದರೆ ಯಾವ ಬೆಲೆಯಲ್ಲಿ ಕೊಂಡಿರುತ್ತವೆ ಹಾಗೂ ಯಾವ ಬೆಲೆಯಲ್ಲಿ ಮಾರಾಟ ಮಾಡಬೇಕು ಎಂಬುದು ನಿಖರವಾಗಿಲ್ಲ. ಸಹಕಾರಿ ಸಂಸ್ಥೆಗಳು ಒಂದು ವೇಳೆ ನಿಮ್ಮ ಏಜೆನ್ಸೀಸ್ ಮೂಲಕ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೇ ಇದ್ದರೆ, ಖಾಸಗಿಯಲ್ಲಿ ಕೊಂಡುಕೊಂಡಿದ್ದಾರೆಯೇ? ಇದುವರೆಗೆ ಬಿಡುಗಡೆಯಾದ ಹಣ ಎಷ್ಟು? ಆದರಲ್ಲಿ ಉಪಯೋಗವಾದ ಹಣ ಎಷ್ಟು? ಹಿಂದಿನ ಸಾರಿ ನಾನು ಪ್ರಶ್ನೆ ಕೇಳುವುದಿಲ್ಲವೆಂದು ಹೇಳಿ ಕುಳಿತದ್ದು ಉಂಟು. ಆದುದರಿಂದ ನಿಧಾನವಾಗಿ ಅರ್ಥವಾಗುವ ಹಾಗೆ ಕೇಳುತ್ತಿದ್ದೇನೆ. ಉಪಯೋಗವಾಗಿರುವ ಹಣ ಎಷ್ಟು? 69 ಕೋಟಿ ರೂಪಾಯಿಗಳಲ್ಲಿ ಇದುವರೆಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಆದರಲ್ಲಿ ಎಷ್ಟು ಹಣ ರೈತರ ಕೈಗೆ ಸೇರಿದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ :- ಒಟ್ಟು ಕೊಡಬೇಕಾಗಿರತಕ್ಕ ಹಣ ಇದ್ದದ್ದು 41.72 ಕೋಟಿ.

ಶ್ರೀ ಡಿ.ಬಿ.ಚಂದ್ರೇಗೌಡ :- ಇಲ್ಲ 69 ಕೋಟಿ. ಅದರಲ್ಲಿ ಉಪಯೋಗವಾಗಿರುವ ಹಣ ಎಷ್ಟು?

ಶ್ರೀ ಎನ್.ಹುಚ್ಚಮಾಸ್ತಿಗೌಡ :- ಇದರಲ್ಲಿ ನಾವು 22 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅವರಿಗೆ ಹಂಚಲಾಗಿದೆ. ಇವರು ಎಷ್ಟು ಜನ ರೈತರು ಎಂದರೆ 2 ಲಕ್ಷದ 6402 ಮಂದಿ, ಸಣ್ಣ ಮತ್ತು ಅತಿಸಣ್ಣ ರೈತರಿಗೆ ಈ ಹಣ ಕೊಡಲಾಗಿದೆ.

ಶ್ರೀ ಡಿ.ಬಿ.ಚಂದ್ರೇಗೌಡ :- ಸರ್ಕಾರದಿಂದ ಉತ್ತರ ಸಿಗುವುದಿಲ್ಲ; ಆದರೂ ರೆಕಾರ್ಡಿಗೆ ಹೋಗಲಿ ಎಂದು ಕೇಳುತ್ತಿದ್ದೇನೆ. ಈ ಯೋಜನೆಯಲ್ಲಿ ಕೇಂದ್ರದಿಂದ ನೂರಕ್ಕೆ ನೂರರಷ್ಟು ಸಹಾಯಧನ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಕಳೆದ ಸಾರಿ ಸಹಾಯಧನ ಕೊಟ್ಟರು. 27 ಕೋಟಿ ರೂಪಾಯಿಗಳನ್ನು ಉಪಯೋಗಿಸಲಿಲ್ಲ ಎಂದು ನಮ್ಮ ಆಪಾದನೆ ಇತ್ತು ಆಗಲೂ ಉತ್ತರ ಹೇಳಲಿಲ್ಲ. ಈಗಲೂ ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳಲಿಲ್ಲ, ಮಾನ್ಯ ಅಧ್ಯಕ್ಷರು ನಮ್ಮ ರಕ್ಷಣೆಗೆ ಬಾರದಿದ್ದರೆ ನಾವು ಪ್ರಶ್ನೆ ಕೇಳಿ ಪ್ರಯೋಜನವಿಲ್ಲ. ಸಹಕಾರಿ ಸಂಸ್ಥೆಗಳು ನಿಮ್ಮ ಏಜೆನ್ಸಿಗಳು. ಆ ಏಜೆನ್ಸಿಗಳು ಗೊಬ್ಬರವನ್ನು 1-4-93ಕ್ಕೆ ಮುಂಚೆ ಕೊಂಡು ಸ್ಟಾಕ್ ಮಾಡಿದ್ದರೆ ನೀವು ಯಾವ ದರದಲ್ಲಿ ಮಾರಬೇಕು? ರೈತರಿಗೆ ಇರುವ ತೊಂದರೆ ಏನೆಂದರೆ, ಸಣ್ಣವನು ಅತಿ ಸಣ್ಣವನು ಯಾರು ಎಂದು ಪಟ್ಟಿ ಮಾಡಿ ನೀವು ಕೊಡುವ ವೇಳೆಗೆ 50ರಿಂದ 75 ರೂಪಾಯಿ ಖರ್ಚಾಗುತ್ತದೆ. ಎಲ್ಲೇ ಗೊಬ್ಬರ ತೆಗೆದುಕೊಳ್ಳಲಿ ಅವನು ರಶೀತಿ ತಂದುಕೊಟ್ಟರೆ ಅವನಿಗೆ ಕೊಡಬೇಕಾದ ಸಬ್ಸಿಡಿ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ :- ಯಾವ ದರದಲ್ಲಿ ಮಾರಬೇಕು, ಯಾರಿಗೆ ಗೊಬ್ಬರ ಬಿಡುಗಡೆ ಮಾಡಬೇಕೆಂದು ಸ್ಪಷ್ಟವಾಗಿದೆ. ಸಣ್ಣ ಮತ್ತು ಅತಿಸಣ್ಣ ರೈತರಿಗೆ ಕೊಡಬೇಕಾದ ದುಡ್ಡು ಮತ್ತು ಯಾರು ರೆವಿನ್ಯೂ ಇಲಾಖೆಯಿಂದ ಸಣ್ಣ ರೈತ ಅಥವಾ ಅತಿಸಣ್ಣ ರೈತ ಎಂದು ಚೀಟಿ ತಂದಿರುತ್ತಾನೆ; ಆ ಚೀಟಿ ಕೊಟ್ಟರೆ ಗೊಬ್ಬರ ಕೊಂಡುಕೊಳ್ಳುವುದಕ್ಕೆ ಅವನಿಗೆ ಹಕ್ಕಿದೆ, ಅವನಿಗೆ ಆ ಗೊಬ್ಬರವನ್ನು ಕೊಡಬೇಕೆಂದು ತೀರ್ಮಾನವಾಗಿದೆ. ಆದ್ದರಿಂದ ಆ ಚೀಟಿ ತೆಗೆದುಕೊಂಡು ಹೋಗಿ ಕೊಟ್ಟ ಕೂಡಲೇ ಅವನಿಗೆ ಆಗೊಬ್ಬರವನ್ನು ಸೊಸೈಟಿಯಿಂದ ಆಗಬಹುದು ಅಥವಾ ಬೇರೆ ವರ್ತಕರಿಂದ ಆಗಬಹುದು ಕೊಡುತ್ತಾರೆ. ಹಣವನ್ನು ಕೊಟ್ಟು ಅದನ್ನು ತೆಗೆದುಕೊಳ್ಳುತ್ತಾರೆ. ಎಷ್ಟು ಸಬ್ಸಿಡಿ ಅವರಿಗೆ ಹಿಡಿದುಕೊಂಡು ಕೊಡಬೇಕೋ ಅದೇ ರೀತಿ ಮಾಡಿಯೇ ಗೊಬ್ಬರವನ್ನು ಕೊಡೋದು. ಅದರಂತೆ ಕೊಟ್ಟಿದೆ. ಮುಕ್ಕಾಲು ಭಾಗ ಈಗಾಗಲೇ ಕೊಡಲಾಗಿದೆ. ಇನ್ನು ಕೇವಲ ಸ್ವಲ್ಪ ಜನ ಉಳಿದಿದ್ದಾರೆ. ಮತ್ತೆ ಕೇಂದ್ರ ಸರ್ಕಾರದವರು ಸಹಾಯ ಮಾಡುತ್ತೇವೆಂದು ಭರವಸೆ ಕೊಟ್ಟಿರುವುದರಿಂದ ಅದನ್ನೂ ಕೂಡ ತೆಗೆದುಕೊಂಡು ನಾವು ಸಣ್ಣ ಹಾಗೂ ಅತಿಸಣ್ಣ ರೈತರಿಗೆ ಕೊಡುವುದಕ್ಕೆ ಸಿದ್ಧತೆ ಮಾಡಿಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್ ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ಹುಚ್ಚಮಾಸ್ತಿಗೌಡರ ವಯಸ್ಸಿನ ಬಗ್ಗೆ ನಮಗೆ ಬಹಳ ಗೌರವ ಇದೆ. ಆದರೆ ಅವರು ಕೊಟ್ಟಿರತಕ್ಕ ಉತ್ತರ ಸತ್ಯಕ್ಕೆ ಬಹಳ ದೂರವಾಗಿದೆ. ಅವರು ತಮ್ಮ ಉತ್ತರದಲ್ಲಿ "ಇಲ್ಲ" "ಉದ್ಭವಿಸುವುದಿಲ್ಲ" ಎಂದು ಏನು ಅಧಿಕಾರಿಗಳು ಬರೆದುಕೊಟ್ಟಿದ್ದಾರೆ ಅದನ್ನೇ ಕೊಟ್ಟಿದ್ದಾರೆ. ನಾವು ಇಲ್ಲಿ 224 ಜನ ಶಾಸಕರು ಇದ್ದೇವೆ. ಇವರಲ್ಲಿ ಸುಮಾರು 200 ಜನ ಹಳ್ಳಿಗಳಿಂದ ಬರುತ್ತಿದ್ದೇವೆ. ಪ್ರತಿಯೊಬ್ಬ ಶಾಸಕರಿಗೂ ಕೂಡಾ ಗೊತ್ತಿದೆ. ತಮ್ಮ ಕೃಷಿ ಇಲಾಖೆ ಗೊಬ್ಬರವನ್ನು ವಿತರಣೆ ಮಾಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು. ಯಾವ

ರೀತಿ ಸಬ್ಸಿಡಿ ಕೊಡಬೇಕೆಂದು ಡಿಸೈಡ್ ಮಾಡಿ ಡ್ರೈಲ್ಯಾಂಡ್‌ಗೆ 50 ರೂಪಾಯಿ, ವೆಟ್ ಲ್ಯಾಂಡ್‌ಗೆ 75 ರೂಪಾಯಿ ಎಂದು ತೀರ್ಮಾನ ಮಾಡಲಾಗಿದೆ. ಆದರೆ ಇವತ್ತು ಒಬ್ಬ ಸಣ್ಣ ರೈತ ಸರ್ಟಿಫಿಕೇಟ್ ತರಬೇಕಾದರೆ ಆತ ಗ್ರಾಮಲೆಕ್ಕಿಗನ ಹತ್ತಿರ ಹೋಗಬೇಕು. ಅವನಿಗೆ ದಮ್ಮಯ್ಯಗುಡ್ಡೆ ಹಾಕಬೇಕು. ಪುಣ್ಯಾತ್ಮ ಅವನು ಸಿಗುವುದಿಲ್ಲ. ಆನಂತರ ಅವನು ತಹಶೀಲ್ದಾರರ ಹತ್ತಿರ ಹೋಗಬೇಕು ಜೊತೆಗೆ ಮೂರು ಫೋಟೋ ತೆಗೆಸಲು ಸ್ಟುಡಿಯೋಗೆ ಹೋಗಬೇಕು. ಫೋಟೋಗೆ 20 ರೂಪಾಯಿ, ಬಸ್‌ಛಾರ್ಜ್ 20 ರೂಪಾಯಿ ಬೇಕಾಗುತ್ತದೆ. ಮತ್ತೆ ಖಾತೆ ಮಾಡಿಸಬೇಕು. ಒಂದು ಮೂಟೆಗೆ ಆತನಿಗೆ ಸಿಗುವ 50 ರೂಪಾಯಿ ಸಬ್ಸಿಡಿಗೆ 65 ರೂಪಾಯಿ ಖರ್ಚು ಆಗುತ್ತದೆ. ಏಕೆ ಇದನ್ನು ವಿತರಣೆ ಮಾಡುತ್ತೀರಿ? ಅಧಿಕಾರಿಗಳು ಕೊಟ್ಟ ಉತ್ತರವನ್ನು ಕೊಡುತ್ತಿದ್ದೀರಿ. ತಾವು ಸ್ವತಃ ರೈತರು. ನಿಮ್ಮ ಅನುಭವದಷ್ಟು ವಯಸ್ಸು ನನಗೆ ಆಗಿಲ್ಲ. ಏನೂ ತೊಂದರೆ ಇಲ್ಲ ಎಂದರೆ ಹೇಗೆ? ತೊಂದರೆ ಇದೆ ಎಂದು ಒಪ್ಪಿಕೊಂಡು ಸಲಹೆ ಕೊಡಿ ಎಂದು ಹೇಳಿ. ಚಂದ್ರೇಗೌಡರು ಹೇಳಿದರು. ಕೇಂದ್ರ ಸರ್ಕಾರದ ಗೊಬ್ಬರದ ವಿತರಣೆ ನೀತಿ ಏನು ಇದೆ ಅದನ್ನು ಈ ಸದನ ಖಂಡನೆ ಮಾಡಿದೆ. ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ ಎಂದು ಹತ್ತಾರು ಸಲ ಹೇಳಿದ್ದೇವೆ. ಈ ಹಿನ್ನೆಲೆಯಲ್ಲಿ ಇವತ್ತು ನಮ್ಮ ರಾಜ್ಯದಲ್ಲಿ ವಿತರಣಾ ವ್ಯವಸ್ಥೆಯನ್ನು ಸರಿಮಾಡುವುದಕ್ಕೆ ಸಾಧ್ಯವೇ?

ಶ್ರೀ ಎನ್ ಹುಚ್ಚಮಾಸ್ತಿಗೌಡ :- ಮಾನ್ಯ ಅಧ್ಯಕ್ಷರೇ, ಈ ಸಣ್ಣ ಮತ್ತು ಅತಿಸಣ್ಣ ರೈತರು ಎನ್ನುವ ಚೀಟಿ ಕೊಡಬೇಕಾದರೆ ಅದನ್ನು ರೆವಿನ್ಯೂ ಇಲಾಖೆಯಿಂದ ಕೊಡುತ್ತಾರೆ. ಅದನ್ನು ಅನುಮಾನ ಮಾಡುವ ಅವಶ್ಯಕತೆ ಇಲ್ಲ. ಅದನ್ನು ತಹಶೀಲ್ದಾರರ ಆಫೀಸಿನಿಂದ ತರುತ್ತಾರೆ. ಅದನ್ನು ತೆಗೆದುಕೊಂಡು ಹೋಗಿ ಕೊಟ್ಟಾಗ ಅವನಿಗೆ ರಿಯಾಯಿತಿ ದರದಲ್ಲಿ ಗೊಬ್ಬರವನ್ನು ಸೊಸೈಟಿಯವರಾಗಲೀ, ವರ್ತಕರಾಗಲೀ ಕೊಡಬೇಕು. ಆ ಗೊಬ್ಬರ ಕೊಡುವುದಕ್ಕೆ ಇದನ್ನು ಕೊಡಬೇಕಾಗುತ್ತದೆ. ಈ ವಿಷಯದಲ್ಲಿ ಸಿಂಧ್ಯಾ ಅವರು ಹೇಳಿದಹಾಗೆ, ಗೊಬ್ಬರ ಸುಲಭದಲ್ಲಿ ಸಿಗುತ್ತದೋ ಇಲ್ಲವೋ ಎನ್ನುವ ಬಗ್ಗೆ ನಾನು ಖುದ್ದು ಹೋಗಿ ನೋಡಿಲ್ಲ. ಆದರೆ ನಮ್ಮ ರೈತರು ಕೊಟ್ಟ ಆ ಚೀಟಿಯನ್ನು ನೋಡಿ ಆ ದರದಲ್ಲಿ ಗೊಬ್ಬರವನ್ನು ಯಾವುದೇ ಸೊಸೈಟಿ ಅಥವಾ ವರ್ತಕರು ಕೊಡದೇ ಇರುವ ಬಗ್ಗೆ ಇದುವರೆವಿಗೂ ಯಾವುದೇ ವಿಧವಾದ ದೂರುಗಳೂ ಬಂದಿಲ್ಲ. ಮಾನ್ಯ ಸದಸ್ಯರು ಆ ಚೀಟಿ ತೋರಿಸಿದರೂ ಇಂತಹ ಕಡೆ ಗೊಬ್ಬರ ಸಿಕ್ಕಿಲ್ಲ ಎನ್ನುವ ಬಗ್ಗೆ ಪೂರ್ಣ ಮಾಹಿತಿಯನ್ನು ಗಮನಕ್ಕೆ ತಂದರೆ ಆ ಬಗ್ಗೆ ನಾನು ವಿಚಾರಣೆ ಮಾಡಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಿ.ರಾಜುಗೌಡ(ಹನೂರು) :- ಮಾನ್ಯ ಅಧ್ಯಕ್ಷರೇ, ಯಾವ ಯಾವ ರಾಸಾಯನಿಕ ರಸಗೊಬ್ಬರಗಳನ್ನು, ಎಷ್ಟೆಷ್ಟು ಬೆಲೆಗೆ ಮಾರಬೇಕೆಂದು ನಮ್ಮ ಕೇಂದ್ರ ಕೃಷಿ ಖಾತೆಯವರು ಸಲಹೆ ಮಾಡಿದ್ದಾರೆ? ಇಷ್ಟಕ್ಕೇ ಮಾರಬೇಕೆಂದು ಅವರು ರಾಜ್ಯ ಸರ್ಕಾರಗಳಿಗೆ ಬೆಲೆ ನಿಗದಿ ಮಾಡಿದ್ದರೆ ನಮ್ಮ ರಾಜ್ಯದಲ್ಲಿ ಅಂತಹ ರಾಸಾಯನಿಕ ರಸಗೊಬ್ಬರಕ್ಕೆ ಟನ್ ಒಂದಕ್ಕೆ ಎಷ್ಟು ಬೆಲೆ ಎಂದು ಅವರು ನಿಗದಿ ಮಾಡಿದ್ದಾರೆ? ಎರಡನೆಯದು ತಮ್ಮ ಉತ್ತರದಲ್ಲಿ ಕೇಂದ್ರ ಸರ್ಕಾರ ರಿಯಾಯಿತಿ ದರದಲ್ಲಿ ರೈತರಿಗೆ ರಸಗೊಬ್ಬರ ಒದಗಿಸಲು 41,773ಕೋಟಿ ರೂಪಾಯಿ ನಿಗದಿಪಡಿಸಲಾಗಿದೆಯೆಂದೂ ಅದರಲ್ಲಿ 10.43ಕೋಟಿ ರೂಪಾಯಿ ಬಿಡುಗಡೆ ಮಾಡಿ ಒದಗಿಸಿದ್ದೇವೆಂದರೆ ಅರ್ಥವೇನು? ದಯಮಾಡಿ ಇದಕ್ಕೆ ಉತ್ತರ ಕೊಡಬೇಕು. ಕೇಂದ್ರ ಕೃಷಿ ಖಾತೆ ಏನು ಸಲಹೆ ಮಾಡಿದೆ, ಆ ದರಕ್ಕಿಂತಲೂ ಹೆಚ್ಚಿನ ದರವನ್ನು

ರಾಜ್ಯದಲ್ಲಿ ನಿಗದಿಪಡಿಸುವುದಕ್ಕೆ ಕಾರಣವೇನು?

11.35 ಪಿ.ಎಂ

ಶ್ರೀ ಎನ್. ಹುಚ್ಚಮಾಸ್ತಿಗೌಡ: - ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರ ಕೊಟ್ಟಪ್ರಕಾರ ಇದಲ್ಲದೆ ಬೇರೆ ಮಾರ್ಗ ಇಲ್ಲ. ರೈತರಿಗೆ ತೊಂದರೆಯಾಗುವುದಾಗಲೀ ವರ್ತಕರು ಕೊಡದಿರುವುದಾಗಲಿ...

ಶ್ರೀ ಬಿ.ರಾಜುಗೌಡ: ದರ ಏನು ? ಕೇಂದ್ರ ಕೃಷಿ ಖಾತೆ ರಸಗೊಬ್ಬರದ ಬೆಲೆಯನ್ನು ಇಂತಿಷ್ಟೇ ದರದಲ್ಲಿ ಮಾರಾಟ ಮಾಡಬೇಕೆಂದು ಇಷ್ಟೇ ನಿಗದಿ ಮಾಡಬೇಕೆಂದು ಒಂದು ಆದೇಶ ಹೊರಡಿಸಿದೆ. ತಾವು ರಾಜ್ಯಮಟ್ಟದಲ್ಲಿ ಅದನ್ನು ಮಾಡಿಲ್ಲ. ತಾವು ಹೆಚ್ಚಿನ ದರವನ್ನು ನಿಗದಿ ಮಾಡಿದ್ದೀರಿ ಇದಕ್ಕೆ ಕಾರಣವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ: - ಮಾನ್ಯಅಧ್ಯಕ್ಷರೇ, ಮತ್ತೆ ಆ ಪ್ರಶ್ನೆಯನ್ನು ದಯಮಾಡಿ ಕೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಚಿಕ್ಕೇಗೌಡ: - ಮಾನ್ಯ ಅಧ್ಯಕ್ಷರೇ, ನಾನೂ ಸಹ ಪ್ರಶ್ನೆ ಕೇಳಲು ಒಂದು ಸಾರಿ ಎದ್ದು ನಿಂತುಕೊಂಡೆ ನನಗೆ ತಾವು ಅವಕಾಶ ಕೊಡಲಿಲ್ಲ.

ಅಧ್ಯಕ್ಷರು: - ಬೇಡ ಕುಳಿತುಕೊಳ್ಳಿ.

ಪ್ರಶ್ನೆ ನಂ. 122(93)

ವಿಷಯ: - ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 122(93)

ಶ್ರೀ ಎ.ಟಿ. ರಾಮಸ್ವಾಮಿ(ಅರಕಲಗೂಡು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ವಿಷಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಭೂಮಾಪಕರುಗಳಿಲ್ಲದೆ ಸಕ್ರಮಗೊಳಿಸುವ ಕಾರ್ಯ ಕುಂಠಿತಗೊಂಡಿರುವುದು ನಿಜವೆ :

ಇ) ಹಾಗಿದ್ದಲ್ಲಿ ಸಕ್ರಮಗೊಳಿಸುವ ಕಾರ್ಯವನ್ನು ತ್ವರಿತಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)

ಅ) ಹೌದು

ಆ) ಹೌದು

ಇ) ಸರ್ಕಾರವು ತಾಲ್ಲೂಕು ಮಟ್ಟದ ಸಮಿತಿಯ ಅಧ್ಯಕ್ಷರುಗಳಿಗೂ, ಕಂದಾಯ ಅಧಿಕಾರಿಗಳಿಗೂ ಕಾಲಾನುಕಾಲಕ್ಕೆ ಸುತ್ತೋಲೆಯನ್ನು ನೀಡಿ ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ತಿಳಿಸಿದೆ. ಪ್ರತಿ ತಿಂಗಳಿಗೂ ಗುರಿಯನ್ನು ಸಹ ನಿಗದಿಪಡಿಸಲಾಗಿದೆ. ಭೂಮಾಪನ ಮತ್ತು ಕಂದಾಯ ವ್ಯವಸ್ಥೆ ನಿರ್ದೇಶಕರಿಗೆ ಅಗತ್ಯವಿದ್ದ ತಾಲ್ಲೂಕುಗಳಿಗೆ ಮೋಜಣಿದಾರರನ್ನು ನೀಡುವಂತೆತಿಳಿಸಲಾಗಿದೆ. ಭೂಮಾಪನ ಮತ್ತು ಕಂದಾಯ ವ್ಯವಸ್ಥೆ ನಿರ್ದೇಶಕರು ಈಗ ಈ ಕೆಲಸಕ್ಕಾಗಿ ಮೋಜಣಿದಾರರನ್ನು ನಿಯೋಜಿಸುವ, ಸ್ಥಳಾಂತರಿಸುವ ಬಗ್ಗೆ ಕೆಲವು ಸಲಹೆಗಳನ್ನು ಸರ್ಕಾರಕ್ಕೆ